ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,

ದಕ್ಷಿಣ ಕನ್ನಡ, ಮಂಗಳೂರು

ಸೆಷನ್ಸ್‌ಕೇಸ್ ನಂಬ್ರ 158/2024

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಡಾ. ಫ್ರೆಡ್ರಿಕ್ ಡಿ ಸೋಜ | ಚಾಸಾ-13 |
| ತಂದೆಯ ಹೆಸರು | : | ದಿ. ನಿಕೋಲಸ್ ಡಿ ಸೋಜ | ಫ್ರಾಸಾ-04 |
| ಪ್ರಾಯ | : | 65 ವರ್ಷ | ದಿನಾಂಕಃ 03.07.2026 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು. |
| ಉದ್ಯೋಗ | : | ನಿವೃತ್ತ ವೈದ್ಯರು | |
| ವಾಸಸ್ಥಳ | : | ಬೊಂದೆಲ್, ಮಂಗಳೂರು | |

**ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರಿಂದಃ**

ನಾನು ಸೆಪ್ಟಂಬರ್ 1991 ರಿಂದ ಮಾರ್ಚ್ 1996 ರವರೆಗೆ ಸುರತ್ಕಲ್ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ವೈದ್ಯಾಧಿಕಾರಿಯಾಗಿ ಕರ್ತವ್ಯ ಮಾಡಿರುತ್ತೇನೆ.

2. ದಿಃ 13.03.1995 ರಂದು ಸುರತ್ಕಲ್ ಪೊಲೀಸ್ ಠಾಣೆಯವರು ನನಗೆ ಕೆ. ನಾರಾಯಣ, ವಯಸ್ಸು 60, ಇವರ ಮೃತ ದೇಹದ ಶವ ಪರೀಕ್ಷೆ ಮಾಡಲು ಮನವಿ ಮಾಡಿಕೊಂಡ ಮೇರೆಗೆ ಅದೇ ದಿನ ಸಂಜೆ 4 ರಿಂದ 5.30 ಗಂಟೆಯವರೆಗೆ ಸುರತ್ಕಲ್ ಪ್ರಾಥಮಿಕ ಆರೋಗ್ಯ ಕೇಂದ್ರದ ಶವಗಾರದಲ್ಲಿ ಶವದ ಮರಣೋತ್ತರ ಪರೀಕ್ಷೆ ಮಾಡಿರುತ್ತೇನೆ.

3. ಮೃತ ಕೆ. ನಾರಾಯಣ ಇವರನ್ನು ಪರೀಕ್ಷೆ ಮಾಡಿದಾಗ ಈ ಕೆಳಕಂಡ ಗಾಯಗಳು ಕಂಡು ಬಂದಿರುತ್ತದೆ.

i) ಬಲ ಕಣ್ಣಿನ ಸುತ್ತ ರಕ್ತ ಹೆಪ್ಪು ಕಟ್ಟಿ ಕಪ್ಪಾಗಿರುತ್ತದೆ.

ii) ಬಲ ತೋಳಿನಲ್ಲಿ ಅರ್ಧ ಇಂಚು ಗಾತ್ರದ ತರಚಿದ ಗಾಯ

iii) ಬಲ ಮೊಣಕಾಲಿನ ಮೇಲೆ 1x0.5 ಇಂಚು ತರಚಿದ ಗಾಯ

iv) ಬಲ ಕಾಲಿನ ಮೊಣಕಾಲಿನ ಕೆಳಗೆ ಅರ್ಧ ಇಂಚು ಗಾತ್ರದ ತರಚಿದ ಗಾಯ

v) ಬಲಕಾಲಿನ ಹೆಬ್ಬೆರಳಿನ ಮೇಲೆ ಸುಮಾರು 0.5x0.5 ಇಂಚು ಗಾತ್ರದ ತರಚಿದ ಗಾಯ

4. ತಲೆ ಬುರಡೆಯನ್ನು ತೆರೆದು ನೋಡಿದಾಗ ಮೆದುಳಿನ ಎಡ ಮತ್ತು ಬಲ ಭಾಗದಲ್ಲಿ ರಕ್ತ ಹೆಪ್ಪು ಗಟ್ಟಿತ್ತು. ಬೇರೆ ಯಾವುದೇ ಒಳ ಗಾಯಗಳು ಕಂಡು ಬಂದಿರುವುದಿಲ್ಲ.

5. ನನ್ನ ಅಭಿಪ್ರಾಯದಲ್ಲಿ ಅಘಾತಕಾರಿ ಮತ್ತು ಮೆದುಳಿನ ರಕ್ತ ಸ್ರಾವದಿಂದ ಮರಣ ಸಂಭವಿಸಿರುತ್ತದೆ.

6. ಈ ಬಗ್ಗೆ ನಾನು ಶವ ಪರೀಕ್ಷಾ ಮರಣೋತ್ತರ ವರದಿಯನ್ನು ನೀಡಿದ್ದು ಅದನ್ನು ನೋಡುತ್ತಿದ್ದು ಅದನ್ನು ಈಗ ನಿಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು.

7. ನನ್ನ ಅಭಿಪ್ರಾಯದಲ್ಲಿ ಒಬ್ಬ ವ್ಯಕ್ತಿಗೆ ಕೈಯಿಂದ ಮತ್ತು ಕೋಲಿನಿಂದ ಹಲ್ಲೆ ಮಾಡಿ ಅವರನ್ನು ದೂಡಾಟ ಮಾಡಿದಾಗ ಮೆದುಳಿನದಲ್ಲಿ ರಕ್ತ ಸ್ರಾವವಾಗಿ ಸಾವು ಸಂಭವಿಸುವ ಸಾಧ್ಯತೆ ಇರುತ್ತದೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಕೆ.ಡಿ.ಎಸ್./ ಎಲ್.ಎ.ಡಿ.ಸಿ. ವಕೀಲರಿಂದಃ**

8. ನಾನು ಎಂ.ಬಿ.ಬಿ.ಎಸ್. ಪದವಿದರನಿರುತ್ತೇನೆ. Forensic ನಲ್ಲಿ ನಾನು ವಿಶೇಷ ಪರಿಣಿತಿ ಪಡೆದಿರುವುದಿಲ್ಲ. ಸಾಕ್ಷಿ ಸ್ವತಃ ನಾವು ಎಂ.ಬಿ.ಬಿ.ಎಸ್. ಓದುವ ಸಮಯದಲ್ಲಿ ನಮಗೆ Forensic ಒಂದು ವಿಷಯವಾಗಿತ್ತು ಎಂದು ಹೇಳುತ್ತಾರೆ. ನಾವು ಎಂ.ಬಿ.ಬಿ.ಎಸ್. ಓದುವಾಗ clinical autopsy ಒಂದು ವಿಷಯವಾಗಿತ್ತು ಮತ್ತು ಆಗ medico legal autopsy ಇರಲಿಲ್ಲ. ಸಾಕ್ಷಿ ಸ್ವತಃ ನಾವು ಸೇವೆಗೆ ಸೇರಿದ ನಂತರ ನಮಗೆ medico legal autopsy ಬಗ್ಗೆ ವೆನ್ ಲಾಕ್ ಆಸ್ಪತ್ರೆಯಲ್ಲಿ ತರಬೇತಿಯನ್ನು ನೀಡಲಾಗಿರುತ್ತದೆ ಎಂದು ಹೇಳುತ್ತಾರೆ.

9. ಈ ಪ್ರಕರಣದ ಮೃತನ ಶವ ಪರೀಕ್ಷೆಗಿಂತ ಮೊದಲು ನಾನು 5-6 ಶವದ ಮರಣೋತ್ತರ ಪರೀಕ್ಷೆಯನ್ನು ಮಾಡಿರುತ್ತೇನೆ. ಶವವನ್ನು ನಮ್ಮ ಆಸ್ಪತ್ರೆಗೆ ದಿಃ 13.03.1995 ರಂದು ಮಧ್ಯಾಹ್ನ 3.30 ಗಂಟೆಗೆ ತರಲಾಗಿರುತ್ತದೆ.

10. ನಿಪಿ-2 ರಲ್ಲಿ ಎಂ.ಎಲ್.ಸಿ. ನಂಬರ್ ಆಗಲೀ ಅಥವಾ ಯು.ಡಿ.ಆರ್. ನಂಬರ್ ನಾಗಲೀ ನಮೂದು ಮಾಡಿಲ್ಲ ಎಂದರೆ ಸರಿ. ನಿಪಿ-2 ರಲ್ಲಿ ಸಾವು ಯಾವಾಗ ಸಂಭವಿಸಿರಬಹುದು ಎಂದು ನಮೂದು ಮಾಡಿಲ್ಲ ಎಂದರೆ ಸರಿ. ಪೊಲೀಸರು ಒದಗಿಸಿದ inquest ಮಹಜರಿನಲ್ಲಿರುವ ಗಾಯಗಳಿಗೂ ಮತ್ತು ನಾನು ನೋಡಿದ ಗಾಯಗಳಿಗೂ ತಾಳೆ ಮಾಡಿ ನೋಡಿರುವುದಿಲ್ಲ.

11. ತಲೆ ಬುರುಡೆಗೆ ಯಾವುದೇ ಮೂಳೆ ಮುರಿತ ಇರಲಿಲ್ಲ. ನಾನು ನಿಪಿ-2 ರಲ್ಲಿ temporal region ಎಂದು ಬರೆದಿರುತ್ತೇನೆ, ಆದರೆ temporal regions ಎಂದು

ಬರೆದಿರುವುದಿಲ್ಲ. ಬಲವಾಗಿ ಜಾರಿ ಬಿದ್ದರೆ Shock ಆಗಿ ಮೆದುಳಿನಲ್ಲಿ ರಕ್ತ ಸ್ರಾವವಾಗುವ ಸಾಧ್ಯತೆ ಇರುತ್ತದೆ. ಒಬ್ಬ ವ್ಯಕ್ತಿಗೆ ಮೊದಲು ಬಿ.ಪಿ. ಯಿಂದ ಸ್ವಲ್ಪ ರಕ್ತ ಸ್ರಾವವಾಗಿದ್ದರೆ ನಂತರ shock ನಿಂದ ರಕ್ತ ಸ್ರಾವವಾದರೆ ಸಾವು ಸಂಭವಿಸುವ ಸಾಧ್ಯತೆ ಇರುತ್ತದೆ. ಒಬ್ಬ ವ್ಯಕ್ತಿಯು ಮದ್ಯಪಾನ ಮಾಡಿ ಜಾರಿ ಬಿದ್ದರೆ ರಕ್ತ ಸ್ರಾವವಾಗುವ ಸಾಧ್ಯತೆ ಇರುತ್ತದೆ.

12. ಅಗತ್ಯ ಇರದೇ ಇದ್ದುದರಿಂದ ಮೃತ ದೇಹದಿಂದ ಯಾವುದೇ ಅಂಗವನ್ನು ಎಫ್.ಎಸ್.ಎಲ್. ಪರೀಕ್ಷೆಗಾಗಿ ತೆಗೆದಿರುವುದಿಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಅಭಿಪ್ರಾಯವು ಪೊಲೀಸರ ಕೋರಿಕೆಯ ಮೇರೆಗೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಬಲವಾಗಿ ಜಾರಿ ಬಿದ್ದಲ್ಲಿ ನಿಪಿ–2 ರಲ್ಲಿ ನಮೂದಿಸಿದ ಹೊರ ಗಾಯಗಳು ಆಗುವ ಸಾಧ್ಯತೆ ಇರುತ್ತದೆ.

**ಮರುವಿಚಾರಣೆಃ** ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓದಿ ಹೇಳಿ ಕೇಳಿ ಸರಿ ಇದೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದ.ಕ. ಮಂಗಳೂರು.